

ಮೆರುಗು ತುಂಬುವ ಕಲಾತಂಡಗಳು

## ಬಹು ಮೇಳಗಳ ಉತ್ಸವ...

ಹಂಪಿ ಉತ್ಸವದಲ್ಲಿ ಶಿಲ್ಪಕಲಾ ಶಿಬಿರ, ಚಿತ್ರಕಲಾ ಶಿಬಿರ, ಜಾನಪದ ಕಲಾತಂಡಗಳ ಮೆರವಣಿಗೆ ವೈಭವ, ವಿಚಾರಗೋಷ್ಠಿ, ಕವಿಗೋಷ್ಠಿ, ಫಲಪುಷ್ಪ ಪ್ರದರ್ಶನ, ಆಹಾರ ಮೇಳ, ಪುಸ್ತಕ ಮೇಳ, ಕರಕುಶಲ ಪ್ರದರ್ಶನ, ಗ್ರಾಮೀಣ ಕ್ರೀಡೆಗಳು, ಕುಸ್ತಿ, ಜಲಸಾಹಸ ಕ್ರೀಡೆಗಳು, ಕುರಿ ಪ್ರದರ್ಶನ, ಎತ್ತು ಪ್ರದರ್ಶನಗಳೆಲ್ಲ ಇವೆ. ಹೆಲಿಕಾಪ್ಟರ್ ಮೂಲಕ ಹಂಪಿಯ ಸೊಬಗನ್ನು ಉಣಬಡಿಸುವ 'ಹಂಪಿ ಬೈ ಸ್ಕೈ' ಕೆಲವು ವರ್ಷಗಳಿಂದ ನಡೆಯುತ್ತಿದೆ. ಈ ಸಲ ಇದೇ ಪ್ರಥಮ ಬಾರಿಗೆ ಸುಮಾರು ಮೂರು ಸಾವಿರ ಡ್ರೋನ್‌ಗಳನ್ನು ಬಳಸಿ ಹಂಪಿಯ ಸ್ಮಾರಕಗಳ ಸೊಗಬನ್ನು, ವಿಜಯನಗರ ಸಾಮ್ರಾಜ್ಯದ ಇತಿಹಾಸವನ್ನು ಆಗಸದಲ್ಲಿ ತೋರಿಸುವ ಡ್ರೋನ್ ಶೋ ನಡೆಯಲಿದೆ. ಗಾಳಿಪಟ ಉತ್ಸವವನ್ನೂ ಆಯೋಜಿಸಲಾಗುತ್ತದೆ. ಹೀಗಾಗಿ ಆಗಸದಿಂದ ಭೂಮಿಯತ್ತ ನೋಡಿದರೆ ಹಾಗೂ ಭೂಮಿಯಿಂದ ಆಗಸದತ್ತ ನೋಡಿದರೆ ಹಂಪಿಯ ಸೊಬಗನ್ನು ಸವಿಯುವ ಅವಕಾಶ ಸಿಗುತ್ತದೆ. 'ವಿಜಯನಗರ ವೈಭವ'ವನ್ನು ಬಿಂಬಿಸುವ 'ಧ್ವನಿ ಬೆಳಕು' ಕಾರ್ಯಕ್ರಮ ಹಂಪಿ ಉತ್ಸವದ ಪ್ರಧಾನ ಆಕರ್ಷಣೆಗಳಲ್ಲಿ ಒಂದು. ಈ ಬಾರಿ ಸಹ ಅದು ಆನೆಲಾಯ ಪ್ರದೇಶದಲ್ಲಿ ನಡೆಯಲಿದೆ.

ಪ್ರೋತ್ಸಾಹ ಸಿಕ್ಕಿದ್ದು ಇದೇ ಅವಧಿಯಲ್ಲಿ. 2008ರಿಂದ ಹಂಪಿ ಉತ್ಸವಕ್ಕೆ ಹೊಸ ಆಯಾಮ ಸಿಕ್ಕಿತು. ಬಳ್ಳಾರಿ ಜಿಲ್ಲೆಯಲ್ಲಿ ಗಣಿ ಕಾಂಚಾಣದ ಝಣಝಣ ಶಬ್ದ ಜೋರಾಗಿತ್ತು. ಸಿನಿಮಾ ನಟ ನಟಿಯರಿಗೆ, ಗಾಯಕ, ಗಾಯಕಿಯರಿಗೆ ಹೆಚ್ಚಿನ ಮಹತ್ವ ಸಿಗತೊಡಗಿತು. ಶಾಸ್ತ್ರೀಯ ಹಾಡು, ನೃತ್ಯಗಳು ಸ್ವಲ್ಪಮಟ್ಟಿಗೆ ಮೂಲೆಗುಂಪಾದವು. ಮುಖ್ಯ ವೇದಿಕೆಯಲ್ಲಿ ಸಿನಿಮಾ ನಟ ನಟಿಯರು, ಗಾಯಕ, ಗಾಯಕರಿಗೆ ಲಕ್ಷ ಲಕ್ಷ ಪ್ರೇಕ್ಷಕರು, ಉಳಿದ ನಾಲ್ಕೈದು ವೇದಿಕೆಗಳಲ್ಲಿ ಕಲಾವಿದರು ಖಾಲಿ ಕುರ್ಚಿಗಳಿಗೆ ತಮ್ಮ ಪ್ರದರ್ಶನ ತೋರಿಸುವ ಅನಿವಾರ್ಯತೆ ಎದುರಾಯಿತು. ಕೆಲವೊಂದು ಬಾರಿ ಅಧಿಕಾರಿಗಳ, ರಾಜಕಾರಣಿಗಳ ಪ್ರಚಾರದ ಉತ್ಸವವಾಗಿಯೂ ಬದಲಾದುದು ಇದೆ. ಆದರೂ ಸರ್ಕಾರಿ ಕಾರ್ಯಕ್ರಮವಾದ್ದರಿಂದ ವರ್ಷ ವರ್ಷ ಸಿಗುವ ಅನುದಾನ ಹೆಚ್ಚುತ್ತಲೇ ಹೋಗಿದೆ. ಕಳೆದ ವರ್ಷ ಸರ್ಕಾರ ₹16 ಕೋಟಿ ಅನುದಾನ ಕೊಟ್ಟಿದೆ.

**ಅದ್ದೂರಿ ಪಟ್ಟಾಭಿಷೇಕ:** ಶ್ರೀಕೃಷ್ಣದೇವರಾಯರ 500ನೇ ಪಟ್ಟಾಭಿಷೇಕ ಮಹೋತ್ಸವದ ನಿಮಿತ್ತ ಅಂದು ಪ್ರವಾಸೋದ್ಯಮ ಸಚಿವರಾಗಿದ್ದ ಗಾಲಿ ಜನಾರ್ದನ ರೆಡ್ಡಿ ಜಗತ್ತಿನ ಗಮನಸೆಳೆಯುವ ನಿಟ್ಟಿನಲ್ಲಿ 2010ರ ಜ.27ರಿಂದ 29ರವರೆಗೆ ಅದ್ದೂರಿ ಉತ್ಸವವನ್ನು ಆಚರಿಸಿದರು. ಬರೋಬ್ಬರಿ ₹75 ಕೋಟಿ ವೆಚ್ಚದಲ್ಲಿ ಉತ್ಸವ ಆಚರಿಸಲಾಯಿತು.



ತುಂಗಭದ್ರಾ ನದಿ ಹಿನ್ನೆಲೆಯಲ್ಲಿ
ಹಂಪಿಯ ವಿರೂಪಾಕ್ಷ ದೇಗುಲದ ಚೆಲುವು

ಚಿತ್ರಗಳು: ತಾಜುದ್ದೀನ್ ಆಜಾದ್

ಅಲ್ಲಿಯವರೆಗೆ ನವೆಂಬರ್ 3, 4 ಮತ್ತು 5ರಂದು ನಡೆಸುತ್ತಿದ್ದ ಹಂಪಿ ಉತ್ಸವವನ್ನು ಜನವರಿಯಲ್ಲಿ ನಡೆಸಲಾಯಿತು.

**ಹಗಲು ಸ್ಮಾರಕಗಳ ವೀಕ್ಷಣೆ, ಸಂಜೆ ಮನರಂಜನೆ:** ಹಂಪಿ ಎಂದರೆ ಬಂಡೆಗಳ ಊರು. ಫೆಬ್ರುವರಿ ನಂತರ ಹಗಲು ಹೊತ್ತಿನಲ್ಲಿ ಓಡಾಡಲು ಸಾಧ್ಯವೇ ಇಲ್ಲದಷ್ಟು ಬಿಸಿಲು. ನವೆಂಬರ್, ಡಿಸೆಂಬರ್ ಮತ್ತು ಜನವರಿ, ಇಲ್ಲಿಗೆ ಭೇಟಿ ನೀಡಲು ಆಹ್ಲಾದಕರ ಸಮಯ. ಹಗಲು ಹೊತ್ತಲ್ಲಿ ಸ್ಮಾರಕಗಳನ್ನು ನೋಡಿಕೊಂಡು ಸಂಜೆ ಮನರಂಜನೆ ಸವಿಯುವಂತಾಗಬೇಕು ಎಂಬ ಕಲ್ಪನೆಯಲ್ಲಿ ಹಂಪಿ ಉತ್ಸವವನ್ನು ನವೆಂಬರ್‌ನಲ್ಲಿ ನಡೆಸಲಾಗುತ್ತಿತ್ತು. ಚಕ್ಕಡಿ ಗಾಡಿಗಳಲ್ಲಿ, ಟ್ರ್ಯಾಕ್ಟರ್‌ಗಳಲ್ಲಿ ಬುತ್ತಿ ಕಟ್ಟಿಕೊಂಡು ಗುಂಪು ಗುಂಪಾಗಿ ಬರುತ್ತಿದ್ದ ಜನರು ಶಾಸ್ತ್ರೀಯ ನೃತ್ಯ, ಸಂಗೀತ, ನಾಟಕ ನೋಡಿ ಬೆಳಿಗ್ಗೆ ಊರಿಗೆ ಮರಳುತ್ತಿದ್ದರು.

ಇಂದು ಪರಿಸ್ಥಿತಿ ಭಿನ್ನವಾಗಿದೆ. ಉತ್ಸವಕ್ಕೆ ಚಕ್ಕಡಿಗಳಲ್ಲಿ ಬರುವವರ ಸಂಖ್ಯೆ ಕಡಿಮೆಯಾಗಿದೆ. ಶಾಸ್ತ್ರೀಯ ನೃತ್ಯ, ಶಾಸ್ತ್ರೀಯ ಸಂಗೀತಗಳಿಗೆ ಜನ ಅಷ್ಟಾಗಿ ಸೇರದ ವೇದಿಕೆಗಳಷ್ಟೇ ಸಿಗುತ್ತಿವೆ. ಮುಖ್ಯ ವೇದಿಕೆಯಲ್ಲಿ ಸಿನಿಮಾ ನಟ, ನಟಿಯರು, ಸಿನಿಮಾ ಗಾಯಕರಿಗಷ್ಟೇ ಮಣೆ ಹಾಕಲಾಗುತ್ತದೆ. ಹೀಗಾಗಿ ಪ್ರಧಾನ ವೇದಿಕೆಯ ಸುತ್ತಮುತ್ತಲಲ್ಲೇ ಜನ ಕಿಕ್ಕಿರಿದು ಸೇರುವಂತಾಗುತ್ತಿದೆ. ಮೂರು ದಿನಗಳ ಉತ್ಸವದಲ್ಲಿ ಹಂಪಿಯಂತಹ ಸಣ್ಣ ಊರಲ್ಲಿ ನಾಲ್ಕರಿಂದ ಐದು ಲಕ್ಷ ಜನ ಸೇರುತ್ತಾರೆ. ಸ್ಮಾರಕಗಳನ್ನು ನೋಡುವ ಕುತೂಹಲ ಅಷ್ಟಾಗಿ ಕಾಣಿಸದಿದ್ದರೂ ಸೆಲೆಬ್ರಿಟಿಗಳನ್ನು ನೋಡಲು ಭಾರಿ ಸಂಖ್ಯೆಯಲ್ಲಿ ಇರುತ್ತಾರೆ. ಜನ ಸೇರುತ್ತಾರೆ ಎಂಬ ಸಮಾಧಾನದಲ್ಲಿ ಉತ್ಸವದ ವೈಭವ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ.

**ನೋಡಲೇಬೇಕು ಹಂಪಿ:** ಹಂಪಿ ಒಂದು ಕಲ್ಲಿನ ರಾಶಿಯಲ್ಲ, ಸ್ಮಾರಕಗಳ ಗೂಡೂ ಅಲ್ಲ. ಸಾಮ್ರಾಜ್ಯಕ್ಕಾಗಿ ಹೆಡೆಮುರಿ ಕಟ್ಟಿ ಕಾದಾಡಿದ ಯುದ್ಧಭೂಮಿಯಲ್ಲ. ಕೇವಲ ಐಶ್ವರ್ಯಕ್ಕಾಗಿ ರಕ್ತದ ಕೋಡಿ ಹರಿಸಿದ ಉದಾಹರಣೆ ಇಲ್ಲಿಲ್ಲ. ಶಕ್ತಿಶಾಲಿ ಸೈನ್ಯ, ಕಲಾ ಸಿರಿವಂತಿಕೆ, ಸಾಹಿತ್ಯದ ಮೊರೆತ, ಸಂಗೀತ, ನಾಟ್ಯ, ಸಂಸ್ಕೃತಿಗಳ ಝೇಂಕಾರ ತುಂಬಿದ್ದ ಈ ಸಾಮ್ರಾಜ್ಯ ಸ್ಥಾಪನೆಯಾದುದು ಧರ್ಮ ರಕ್ಷಣೆಗಾಗಿ.

ಮೂರೂವರೆ ಶತಮಾನಗಳ ಕಾಲ ಈ ಉದ್ದೇಶವನ್ನು ಸಮರ್ಥವಾಗಿಯೇ ಈಡೇರಿಸಿದ ಇಲ್ಲಿನ ರಾಜರು ನಮಗೆಲ್ಲ ಬಿಟ್ಟುಹೋದುದು ಬಹುದೊಡ್ಡ ಆಸ್ತಿಯನ್ನೇ. ವಿಜಯನಗರದ ಪತನದ ನಂತರ, ಕೊಳ್ಳೆ ಹೊಡೆದವರು ಬಾಚಿಕೊಂಡು ಹೋದ ಮುತ್ತು, ರತ್ನ, ವಜ್ರ, ಬಂಗಾರಗಳೆಷ್ಟೋ, ಹಾನಿ ಮಾಡಿದ ಸ್ಮಾರಕಗಳೆಷ್ಟೋ. ಆದರೆ ಹೊತ್ತೊಯ್ಯಲು ಸಾಧ್ಯವಾಗದ ಸ್ಮಾರಕಗಳು ಮಾತ್ರ ನಮಗೆ ಉಳಿದಿವೆ. ಅವುಗಳನ್ನು ನೋಡುತ್ತ ವಿಜಯನಗರ ವೈಭವವನ್ನು ಮೆಲುಕು ಹಾಕಲಾದರೂ ಹಂಪಿಗೆ ಆಗಾಗ ಬರಬೇಕು, ಹಂಪಿ ಉತ್ಸವಕ್ಕೆ ಒಂದು ಸಾಂಸ್ಕೃತಿಕ ಶ್ರೀಮಂತಿಕೆ ಕಣ್ತುಂಬಿಕೊಳ್ಳಬೇಕು. ■